**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ.ನಂ.543/2019**

**ದಿನಾಂಕಃ22.02.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ2 ಸಿ.ಡಬ್ಲ್ಯುಃ2

ಸಾಕ್ಷಿಯ ಹೆಸರು ಃ ರುದ್ರಪ್ಪ ಎಂ.ಕೆ.
ತಂದೆಯ ಹೆಸರು ಃ ಕಲ್ಲಪ್ಪ
ವಯಸ್ಸು ಃ 51 ವರ್ಷ
ಉದ್ಯೋಗ ಃ ಎಲ್.ಐ.ಸಿ. ಏಜೆಂಟ್
ವಾಸ ಃ ಬೀರೂರು

**ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ**

ಚಾಸಾ-1 ರವರ ತಂದೆ ನನಗೆ 20 ವರ್ಷಗಳಿಂದ ಪರಿಚಯ. ಸಾಕ್ಷಿ ನಿಪಿ-9 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2017 ಸಾಲಿನಲ್ಲಿ ಮಾಡಿರುತ್ತೇನೆ. 2017 ನೇ ಇಸವಿಯ 5 ನೇ ತಿಂಗಳಿನಲ್ಲಿ ಪೋಲೀಸರು ನನ್ನನ್ನು ಚಾಸಾ-1 ರವರ ತಂದೆಯ ಮನೆಗೆ ಕರೆಸಿದ್ದರು. ಆಗ ನನ್ನೊಂದಿಗೆ ಚಾಸಾ-1, 3 ರವರು, ಪೋಲೀಸರು ಹಾಗೂ ಚಾಸಾ-1 ರವರ ತಂದೆ-ತಯಿ ಹಾಜರಿದ್ದರು. ಆಗ ಚಾಸಾ-1 ರವರು ಅವರ ಮದುವೆಯ ಆಮಂತ್ರಣ ಪತ್ರಿಕೆ ಮತ್ತು ಛಾಯಾಚಿತ್ರಗಳನ್ನು ಪೋಲೀಸರಿಗೆ ನೀಡಿದರು, ನಾನು ಹಾಜರಿದ್ದು, ಸಹಿ ಮಾಡಿರುತ್ತೇನೆ. ಸಹಿಯನ್ನು ಚಾಸಾ-1 ರವರ ತಂದೆಯ ಮನೆಯಲ್ಲಿ ಮಾಡಿರುತ್ತೇನೆ. ಮಹಜರನ್ನು ಸಂಜೆ 4.30 ರಿಂದ 5.30 ರವರೆಗೆ ಮಾಡಿರುತ್ತಾರೆ. ಪೋಲೀಸರಿಗೆ ಚಾಸಾ-1 ರವರು ಸ್ಥಳವನ್ನು ತೋರಿಸಿರುತ್ತಾರೆ. ಸಾಕ್ಷಿಯು ಸ್ಥಳದಲ್ಲಿ ತೆಗೆದ ನಿಪಿ-7 ಮತ್ತು 8 ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಚಾಸಾ-1 ರವರು ಹಾಜರುಪಡಿಸಿದ ನಿಪಿ-2 ರಿಂದ 6 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಬಿ. ವಕೀಲರಿಂದಃ**

ಚಾಸಾ-1 ರವರ ತಂದೆ ಮನೆ ಮತ್ತು ನನ್ನ ಮನೆ ಸುಮಾರು 60 ಅಡಿಗಳ ಅಂತರದಲ್ಲಿ ಇರುತ್ತದೆ. ಆ ದಿನ ನಾನು ಒಂದು ಪೇಪರ್ ಗೆ ಸಹಿಯನ್ನು ಹಾಕಿರುತ್ತೇನೆ. ಮಹಜರಿಗೆ ಬರುವಂತೆ ಚಾಸಾ-1 ರವರ ತಂದೆ ಕರೆದಿದ್ದಾರೆ ಅಂದರೆ ಸರಿ. ನಾನು ಸ್ಥಳಕ್ಕೆ

ಹೋದಾಗ ಪೋಲೀಸರು ಆಗಲೇ ಬಂದಿದ್ದರು. ಮದುವೆ ಆಮಂತ್ರಣ ಮತ್ತು ಛಾಯಾಚಿತ್ರಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಸಹಿ ಮಾಡಿರುತ್ತೇನೆ. ಗಲಾಟೆಯ ವಿಚಾರವಾಗಿ ಪೋಲೀಸರು ಬಂದಿದ್ದರು ಎಂದು ನನಗೆ ಗೊತು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ಮಹಜರ್ ಸಮಯದಲ್ಲಿ ಒಟ್ಟು 6-7 ಜನರು ಇದ್ದರು, ನನ್ನ ಜೊತಗೆ ಚಾಸಾ-3 ರವರು ಇದ್ದರು, ಇತರೆಯವರು ಪೋಲೀಸರು ಆಗಿರುತ್ತಾರೆ. ನಾನು ಚಾಸಾ-1 ರವರ ತಂದೆಯ ಅಧೀನದಲ್ಲಿ ಎಲ್.ಐ.ಸಿ. ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಚಾಸಾ-1 ರವರ ತಂದೆ ನನಗೆ ನಾನು ಎಲ್.ಐ.ಸಿ. ಪ್ರತಿನಿಧಿಯಾಗುವ ಮುಂಚಿನಿಂದಲೂ ಗೊತ್ತು. ಮಹಜರನ್ನು ಪೋಲೀಸರು ಬರೆದಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಮಹಜರನ್ನು ನಾನು ಓದಿ ನೋಡಿಲ್ಲ ಅಂದರೆ ಸರಿಯಲ್ಲ. ಮಹಜರ್ ಮಾಡಿದ ಚಕ್ಕುಬಂದಿಯನ್ನು ಹೇಳಬಲ್ಲೆ. ಮಹಜರ್ ಮಾಡಿದ ಹಾಲ್ ನ ಪೂರ್ವಕ್ಕೆಃ ಮನೆಯಿಂದ ಹೊರ ಹೋಗುವ ಬಾಗಿಲು, ಪಶ್ಚಿಮಕ್ಕೆಃಖಾಸಗಿಯವರ ನಿವೇಶನ, ಉತ್ತರಕ್ಕೆಃಮಲ್ಲೇಶಪ್ಪರವರ ಮನೆ ಮತ್ತು ದಕ್ಷಿಣಕ್ಕೆಃ ಪುರಸಭೆ ರಸ್ತೆ ಬರುತ್ತದೆ. ಸದರಿ ಹಾಲಿನ ಅಳತೆ 16X16 ಅಡಿ ಇರಬಹುದು, ಮನೆಯ ವಿಸ್ತೀರ್ಣ 60X60 ಆಗಿರುತ್ತದೆ.

ಮಹಜರ್ ಗೆ ಬರುವಂತೆ ನನಗೆ ಲಿಖಿತ ನೋಟೀಸನ್ನು ನೀಡಿಲ್ಲ. ನಾನು ಮಹಜರ್ ಮಾಡಿದಾಗ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ, ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರ ತಂದೆ ವಿಶ್ವಾಸದಿಂದ ಇರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.